# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 750 |
| ಉತ್ತರಿಸಬೇಕಾದ ದಿನಾಂಕ | : | 17.09.2021. |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಟೋಕಿಯೋದಲ್ಲಿ ನಡೆದಂತಹ ಒಲಂಪಿಕ್ಸ್ ಮತ್ತು ಪ್ಯಾರಾ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಕರ್ನಾಟಕದಿಂದ ಭಾಗವಹಿಸಿದ ಕ್ರೀಡಾಪಟುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಟೋಕಿಯೋದಲ್ಲಿ ನಡೆದ ಒಲಂಪಿಕ್ಸ್ ಮತ್ತು ಪ್ಯಾರಾ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಕರ್ನಾಟಕದಿಂದ ಭಾಗವಹಿಸಿದ ಒಟ್ಟು ಕ್ರೀಡಾಪಟುಗಳ ಸಂಖ್ಯೆ 05: ಕ್ರೀಡಾಪಟುಗಳ ವಿವರ ಕೆಳಕಂಡಂತಿದೆ:-<br><br>ಕ್ರ.ಸಂ / ಹೆಸರು / ಕ್ರೀಡೆ<br>1 / ಕು. ಅದಿತಿ ಅಶೋಕ್ / ಗಾಲ್ಫ್<br>2 / ಶ್ರೀಹರಿ ನಟರಾಜ್ / ಈಜು<br>3 / ಫೌವಾದ್ ಮಿರ್ಜಾ / ಈಕ್ವೇಸ್ಟ್ರಿಯನ್<br>4 / ಶಕೀನಾ ಖಾತೂನ್ / ಪ್ಯಾರಾ ಪವರ್ ಲಿಫ್ಟಿಂಗ್<br>5 / ಶ್ರೀ ನಿರಂಜನ್ ಎಂ / ಪ್ಯಾರಾ ಈಜು |
| ಆ) | ಒಲಂಪಿಕ್ಸ್ ಮತ್ತು ಪ್ಯಾರಾ ಒಲಂಪಿಕ್ಸ್ ನಲ್ಲಿ ಪದಕ ಪಡೆದ ಕ್ರೀಡಾಪಟುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | |
| ಇ) | ಸದರಿ ಕ್ರೀಡಾಪಟುಗಳಿಗೆ ಯಾವ ಯಾವ ಕ್ರೀಡೆಗಳಲ್ಲಿ ಯಾವ ಯಾವ ಪದಕಗಳನ್ನು ಗಳಿಸಿದ್ದಾರೆ; (ಪೂರ್ಣ ವಿವರ ನೀಡುವುದು) | ಮೇಲಿನ ಐವರು ಕ್ರೀಡಾಪಟುಗಳು ಒಲಂಪಿಕ್ಸ್ ಮತ್ತು ಪ್ಯಾರಾ ಒಲಂಪಿಕ್ಸ್ ನಲ್ಲಿ ಯಾವುದೇ ಪದಕ ಪಡೆದಿರುವುದಿಲ್ಲ. |
| ಈ) | ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ತರಬೇತಿಗಾಗಿ ಸರ್ಕಾರದ ವತಿಯಿಂದ ಯಾವ ಸೌಲಭ್ಯಗಳನ್ನು ನೀಡಲಾಗಿತ್ತು; (ಪೂರ್ಣ ವಿವರ ನೀಡುವುದು) | ಟೋಕಿಯೋ ಒಲಂಪಿಕ್ಸ್ ಕ್ರೀಡಾಕೂಟಕ್ಕೆ ಆಯ್ಕೆಯಾದ ಕರ್ನಾಟಕದ ಒಟ್ಟು 5 ಕ್ರೀಡಾಪಟುಗಳಿಗೆ ತಲಾ ರೂ.10.00 ಲಕ್ಷಗಳ ಪ್ರೋತ್ಸಾಹಧನವನ್ನು ನೀಡಲಾಗಿರುತ್ತದೆ. |
| ಉ) | ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಸರ್ಕಾರ ಯಾವ ಯಾವ ಸೌಲಭ್ಯಗಳನ್ನು ನೀಡಲಾಗಿತ್ತು; (ಆರ್ಥಿಕ ಹಾಗೂ ಇತರೆ ಮೂಲಭೂತ ಸೌಲಭ್ಯಗಳ ಪೂರ್ಣ ವಿವರಗಳನ್ನು ನೀಡುವುದು) | ಟೋಕಿಯೋ ಒಲಂಪಿಕ್ಸ್ ಕ್ರೀಡಾಕೂಟಕ್ಕೆ ಆಯ್ಕೆಯಾದ ಕರ್ನಾಟಕದ ಒಟ್ಟು 5 ಕ್ರೀಡಾಪಟುಗಳಿಗೆ ತಲಾ ರೂ.10.00 ಲಕ್ಷಗಳ ಪ್ರೋತ್ಸಾಹಧನವನ್ನು ನೀಡಲಾಗಿರುತ್ತದೆ.<br><br>ಸನ್ಮಾನ್ಯ ಘನತೆವೆತ್ತ ಗೌರವಾನ್ವಿತ ರಾಜ್ಯಪಾಲರು, ಕರ್ನಾಟಕ ಇವರು ಟೋಕಿಯೋ ಒಲಂಪಿಕ್ಸ್ ನಲ್ಲಿ ಭಾಗವಹಿಸಿದ ಮೂರು ಕರ್ನಾಟಕ ಕ್ರೀಡಾಪಟುಗಳಿಗೆ ಮತ್ತು |

| | | |
|---|---|---|
| | | ಮಹಿಳಾ ಹಾಕಿ ತಂಡದ ಸಹಾಯಕ ತರಬೇತುದಾರರಾಗಿ ಕಾರ್ಯ ನಿರ್ವಹಿಸಿದ ಒಬ್ಬ ತರಬೇತುದಾರರಿಗೆ ತಲಾ ರೂ.1.00 ಲಕ್ಷಗಳ ನಗದು ಪ್ರೋತ್ಸಾಹಧನವನ್ನು ನೀಡಿ ಸನ್ಮಾನಿಸಿರುತ್ತಾರೆ. |
| ಊ) | ಪದಕ ಪಡೆದ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹದಾಯಕವಾಗಿ ನೀಡಲಾಗುತ್ತಿರುವ ಸೌಲಭ್ಯಗಳೇನು? (ವಿವರ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ:ಯುಸೇಇ 280 ಯುಸೇಕ್ರೀ 2017; ದಿನಾಂಕ:09-10-2017ರ ಆದೇಶದ ಪ್ರಕಾರ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿ ಚಿನ್ನದ ಪದಕ ಪಡೆದ ಕ್ರೀಡಾಪಟುಗಳಿಗೆ ರೂ.500.00, ಬೆಳ್ಳಿ ಪದಕ ಪಡೆದ ಕ್ರೀಡಾಪಟುಗಳಿಗೆ ರೂ.300.00 ಮತ್ತು ಕಂಚಿನ ಪದಕ ಪಡೆದ ಕ್ರೀಡಾಪಟುಗಳಿಗೆ ರೂ.200.00 ಲಕ್ಷಗಳ ನಗದು ಬಹುಮಾನ ನೀಡಲು ಅಸ್ಪದವಿದೆ.<br><br>ಒಲಂಪಿಕ್ಸ್, ಪ್ಯಾರಾಲಿಂಪಿಕ್ಸ್ ನಲ್ಲಿ ಪದಕ ವಿಜೇತರಾಗುವ ರಾಜ್ಯದ ಕ್ರೀಡಾಪಟುಗಳಿಗೆ ಸರ್ಕಾರದ ಇಲಾಖೆಗಳಲ್ಲಿ ಗ್ರೂಪ್-ಎ ವೃಂದದ ಹುದ್ದೆಗಳನ್ನು ಹಾಗೂ ಏಷ್ಯನ್ ಗೇಮ್ಸ್ ಮತ್ತು ಕಾಮನ್ ವೆಲ್ತ್ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಿಗೆ ಗ್ರೂಪ್-ಬಿ ವೃಂದದ ಹುದ್ದೆಗಳನ್ನು ನೀಡಲು ಕರಡು ನಿಯಮಾವಳಿಗಳನ್ನು ಸಿದ್ದಪಡಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ. |

**ವೈಎಸ್‌ಡಿ/ಇಬಿಬಿ/139/2021**

**(ಡಾ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.